**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 274/2018**

| | | | |
|---|---|---|---|
| **ಹೆಸರು** | **:** | **ಶರಣಬಸಪ್ಪ ಕೊಡ್ಲಾ** | **ಚಾ.ಸಾ. 22** |
| **ತಂದೆಯ ಹೆಸರು** | **:** | **ಚಂದ್ರಪ್ಪ ಕೊಡ್ಲಾ** | **ಪ್ರಾ.ಸಾ. 13** |
| **ವಯಸ್ಸು** | **:** | **41 ವರ್ಷ** | **ದಿನಾಂಕಃ 22-07-2025** |
| **ಉದ್ಯೋಗ** | **:** | **ಪೋಲಿಸ ಇನ್ಸಪೆಕ್ಟರ** | |
| **ವಾಸಸ್ಥಳ** | **:** | **ಆಳಂದ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 08-06-2016 ರಿಂದ 30-07-2017 ರವರೆಗೆ ಚಿಂಚೋಳಿ ಪೋಲಿಸ ಠಾಣೆಯಲ್ಲಿ PSI ಆಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 08-06-2016 ರಂದು ಚಾಸಾ-21 ರವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡು ದಿನಾಂಕ 29-06-2016 ರಂದು ಚಾಸಾ-1ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 06-03-2017 ರಂದು FSL ವರದಿಯನ್ನು ಪಡೆದಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-28 ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು. ದಿನಾಂಕ 20-04-2017 ರಂದು ಪ್ರಾಸಾ-1ರವರಿಗೆ ಕೆಲವೊಂದು ಮಾಹಿತಿ ಕೇಳಿದ್ದು ಅದರಂತೆ ಅವರು ನಿಪಿ-21 ರ ದಾಖಲೆ ಪ್ರಕಾರ ಮಾಹಿತಿಯನ್ನು ನೀಡಿರುತ್ತಾರೆ. ನಿಪಿ-21 ರಲ್ಲಿರುವ ನನ್ನ ಸಹಿಯನ್ನು ನಿಪಿ-21(ಬಿ) ಎಂದು ಗುರುತಿಸಲಾಯಿತು. ದಿನಾಂಕ 05-06-2017 ರಂದು ಚಾಸಾ-12 ರಿಂದ 15 ರವರ ಹೇಳಿಕೆಗಳನ್ನು ಪಡೆದಿದ್ದೇನೆ. ಈಗ ನೋಡುತ್ತಿರುವ ನಿಪಿ-19, 20, 25 ಹಾಗೂ 27 ರ ಹೇಳಿಕೆಗಳನ್ನು ಪಡೆದಿದ್ದೇನೆ. ಅದೇ ದಿನ ಚಾಸಾ-1ರವರಿಂದ ಬಸವರಾಜರವರು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಪತ್ರವನ್ನು ನೀಡಿದ್ದು ಅದನ್ನು ಪಡೆದುಕೊಂಡಿದ್ದೇನೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-24 ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-24(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿಯ ವಿರುದ್ಧ ದೋಷಾರೋಪಣೆ ಪತ್ರ ಸಲ್ಲಿಸಲು ಅನುಮತಿಯನ್ನು ಪಡೆದಿರುತ್ತೇನೆ. ಸದರಿ ಅನುಮತಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-22 ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-22(ಬಿ) ಎಂದು ಗುರುತಿಸಲಾಯಿತು. ಅದೇ ದಿನ ತನಿಖೆ ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ.

ನಾನು ಕಡತ ಸಲ್ಲಿಸುವ ಸಮಯಕ್ಕೆ ಈಗ ನೋಡುತ್ತಿರುವ ಜಪ್ತಿ ಪಂಚನಾಮೆಯ ಪ್ರಕಾರ ಚಾಸಾ-20

ರವರು ಜಪ್ತಿ ಪಂಚನಾಮೆಯನ್ನು ಮಾಡಿ ಸದರಿ ಜಪ್ತಿ ಪಂಚನಾಮೆಯನ್ನು ಕಡತದಲ್ಲಿ ಅಳವಡಿಸಿದ್ದರು. ಸಾಕ್ಷಿ ಗುರುತಿಸಿದ ಜಪ್ತಿ ಪಂಚನಾಮೆಯನ್ನು ನಿಪಿ-29 ಎಂದು ಗುರುತಿಸಲಾಯಿತು. ಚಾಸಾ-20 ರವರು ಈಗ ಮೃತಪಟ್ಟಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ JPA ವಕೀಲರಿಂದಃ</u>**

ನಾನು ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ತನಿಖೆ ಕಾಲಕ್ಕೆ FSL ವರದಿ ಪಡೆದಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಾಸಾ-1ರವರು ಎಲ್ಲಾ ಕೃತ್ಯವನ್ನು ಎಸಗಿ ಆರೋಪಿಯ ಮೇಲೆ ಸುಳ್ಳು ಆಪಾಧನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-20ರವರು ನಿಪಿ-29 ರ ಜಪ್ತಿ ಪಂಚನಾಮೆ ಎಲ್ಲಿ ಜರುಗಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪ್ರಾಸಾ-1ರವರು ಹೇಳಿದಂತೆ ಠಾಣೆಯಲ್ಲಿ ಕುಳಿತು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಾಸಾ-1ರವರು ತಾಲ್ಲೂಕ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕಾರಣ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ.**